# ಪೂರ್ಣಾವತಾರ ಶ್ರೀಕೃಷ್ಣ

## ಸ್ವಾಮಿ ಅಶೋಕಾನಂದ

ಸ್ವಾಮಿ ಅಶೋಕಾನಂದರು ರಾಮಕೃಷ್ಣ ಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿದ್ದರು. (೧೯೨೬ ರಿಂದ ೧೯೩೦ರವರೆಗೆ). ಅನಂತರ ೧೯೩೨ರಿಂದ ೧೯೬೯ರಲ್ಲಿ, ಅವರು ಕಾಲವಾಗುವವರೆಗೆ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಅಧ್ಯಕ್ಷರಾಗಿದ್ದರು. ಸ್ವಾಮಿ ಅಶೋಕಾನಂದರು ಪ್ರಭಾವಶಾಲಿಯಾದ ಬರಹಗಾರ ರಾಗಿದ್ದರು. ಅವರು 'ಪ್ರಬುದ್ಧ ಭಾರತ'ದಲ್ಲಿ ಬರೆದ ಸಂಪಾದಕೀಯ ಮತ್ತು ಇತರ ಲೇಖನಗಳು ಅವರ ಪ್ರೌಢಿಮೆ, ಪ್ರಬುದ್ಧ ದೃಷ್ಟಿಕೋನ ಮತ್ತು ಶ್ರೇಷ್ಠಲೇಖನ ಶೈಲಿಗೆ ನಿದರ್ಶನಗಳಾಗಿವೆ. ಪ್ರಸ್ತುತ ಲೇಖನ, 'ಪ್ರಬುದ್ಧ ಭಾರತ'ದಲ್ಲಿ ೧೯೩೧ ರಲ್ಲಿ ಪ್ರಕಟವಾದ ಅವರ ಆಂಗ್ಲ ಲೇಖನದ ಅನುವಾದ. ಅನುವಾದಕರಾದ ಡಾ|| ಇ. ವಸಂತಕುಮಾರ ಶ್ರೀರಾಮ ಕೃಷ್ಣ ಆಶ್ರಮದ ನಿಕಟ ಭಕ್ತರು.

ಶ್ರೀಕೃಷ್ಣನ ಜೀವನ ಮೂರು ಬಗೆಯಾಗಿ ಕಾಣುವುದು. ಶ್ರೀಕೃಷ್ಣ ವೃಂದಾವನದಲ್ಲಿ ಗೋಪಾಲಕನಂತೆ ಇರುವುದು; ಶ್ರೀಕೃಷ್ಣ ಪ್ರಾಪಂಚಿಕ ವ್ಯಾವಹಾರಿಕ ಜೀವನವನ್ನು ನಡೆಸುವುದು; ಶ್ರೀಕೃಷ್ಣ ಒಬ್ಬ ಆಚಾರ್ಯನಾಗಿರುವುದು.

### ಬೃಂದಾವನ ಶ್ರೀಕೃಷ್ಣ

ಕಾಲಾನುಕಾಲದಿಂದ ಅವನ ಮೇಲೆ ಹೇರಿರುವ ಪವಾಡಗಳು ಮತ್ತು ಅತಿರೇಕಗಳನ್ನು ಬಿಟ್ಟರೂ ಕೂಡ ಅವನ ವ್ಯಕ್ತಿತ್ವ ಆ ಮೂರು ಬಗೆಗಳಲ್ಲಿಯೂ ಅದ್ಭುತವಾಗಿರುವುದು. ವೃಂದಾವನದಲ್ಲಿ ಅವನು ಅಲೌಕಿಕ ಆಕರ್ಷಣೆಯ ಕೇಂದ್ರವಾಗಿರುವನು. ಅವನ ಗೋವಳ ಸ್ನೇಹಿತರು, ಅವನ ತಾಯಿ, ಗೋಪಿಯರು—ನಿಜವಾಗಿ, ಯಾರು ಅವನ ಸಂಪರ್ಕಕ್ಕೆ ಬಂದರೂ ಅವರೆಲ್ಲರೂ ಅವನೆಡೆಗೆ ಅಯಸ್ಕಾಂತದ ರೀತಿ ಆಕರ್ಷಿತರಾದರು. ಅವನ ಮೇಲೆ ಅವರಿಗಿದ್ದ ಪ್ರೀತಿ ಎಲ್ಲ ಲೌಕಿಕ ಪ್ರೀತಿಗಳನ್ನೂ ಮೀರಿರುವುದು ಮತ್ತು ಅವರನ್ನು ಇಂದ್ರಿಯ ಪ್ರಪಂಚದಾಚೆಗೆ ಕರೆದೊಯ್ಯುವುದು. ಅವನೊಡನೆ ಇರುವವರೆಗೂ ಅವರು ಸದಾ ಆನಂದದಲ್ಲಿರುತ್ತಿದ್ದರು. ಆ ಸ್ಥಿತಿ ಅವರಿಗೇನೂ ಅರ್ಥ ವಾಗುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಶ್ರೀಕೃಷ್ಣ ಮಥುರೆಗೆ ಹೋಗ ಬೇಕಾಯಿತು. ಆಗಲೇ ಅವರ ಸದಾನಂದದ ಸ್ಥಿತಿ ಭಗ್ನವಾದುದು. ಅವರಲ್ಲಿ ಕೆಲವರು ಅವನನ್ನು ಅವತಾರ ಪುರುಷನೆಂದು ಗುರುತಿಸಿದರು, ಕೆಲವರು ಅವನೊಂದಿಗಿರುವುದೇ ಇಂದ್ರಿಯಾತೀತ ಆನಂದ ಎಂಬು ದಕ್ಕಿಂತ ಹೆಚ್ಚಾಗಿ ಮತ್ತೇನನ್ನೂ ತಿಳಿಯಲು ಇಚ್ಛಿಸಲಿಲ್ಲ. ಅವನು ಎಲ್ಲರಿಗೂ ಒಬ್ಬ ವಿಸ್ಮಯಕಾರಿ ರಹಸ್ಯತಮ ವ್ಯಕ್ತಿತ್ವವಾಗಿದ್ದನು. ಅವನು ಎಲ್ಲರನ್ನೂ ತನ್ನ ಮುಗ್ಧಮಾಯೆಯಿಂದ ದೀರ್ಘ ಅಲೌಕಿಕ ಆನಂದದ ಕನಸಿನಲ್ಲಿರುವಂತೆ ಇಟ್ಟಿದ್ದನು.

ಆದರೆ, ಹಾಗಿರುವಾಗಲೇ ತಾನು ಯಾವುದಕ್ಕೂ ಅಂಟದೆ ಇದ್ದನು. ಅದೆಲ್ಲವೂ ಅವನಿಗೆ ಕ್ರೀಡೆಯಾಗಿತ್ತು. ಪ್ರತಿಯೊಬ್ಬರೂ ಅವನ ವ್ಯಕ್ತಿತ್ವದ ಚುಂಬಕ ಆಕರ್ಷಣೆಯನ್ನು ಅನುಭವಿಸಿದರು. ವೇಗವಾಗಿ ಚಲಿಸುವಾಗ ನಾವು ಏನನ್ನೂ ಆಲೋಚಿಸಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆ, ಕೃಷ್ಣನ ಪ್ರೀತಿ ತಮ್ಮ ಮೇಲೆ ಇರುವುದೊ ಇಲ್ಲವೊ ಎಂದು ತಿಳಿಯಲು ಕಾಲವಿರಲಿಲ್ಲ. ಅವರ ಪ್ರೀತಿ, ಪ್ರೀತಿಗೋಸ್ಕರವಾಗಿ ಪ್ರೀತಿಯಾಗಿತ್ತು. ಅವರ ಪ್ರೀತಿ ಅವರಿಗೆ ಮರು ಪ್ರೀತಿಯನ್ನು ತರುತ್ತಿತ್ತೊ ಇಲ್ಲವೊ ಎಂಬುದನ್ನು ತಿಳಿಯಲು ಅವರು ಯತ್ನಿಸಲಿಲ್ಲ. ಏಕೆ? ಏಕೆಂದರೆ, ಅವರಿಗೆ ಅವನಲ್ಲಿದ್ದ ಪ್ರೀತಿ ಎಷ್ಟು ಸಂತೋಷವನ್ನು ನೀಡಿತೆಂದರೆ, ಅದರಲ್ಲಿ ಅವರ ಇತರ ಆಲೋಚನೆಗಳೆಲ್ಲವೂ ಕಡೆಗಣಿಸಲ್ಪಟ್ಟಿದ್ದುವು.

### ರಾಜಕೀಯ ಮುತ್ಸದ್ದಿಯಾಗಿ

ಮಥುರಾ ನಗರಿಗೆ ಶ್ರೀಕೃಷ್ಣನು ಕಾಲಿಟ್ಟ ಕೂಡಲೇ ನಾವು ಅವನನ್ನು ಹೊಸ ಪಾತ್ರದಲ್ಲಿ ಕಾಣುವೆವು. ಅಲ್ಲಿಂದೀಚೆಗೆ ಅವನೊಬ್ಬ ಯೋಧ, ರಾಜಕಾರಣಿ ಮತ್ತು ಸೂತ್ರಧಾರಿ. ಎಲ್ಲಿಂದಲೋ ಬಂದ ವ್ಯಕ್ತಿ ಇದ್ದಕ್ಕಿದ್ದಂತೆ ವಾಸ್ತವ ಪ್ರಪಂಚವನ್ನು ಪ್ರವೇಶಿಸುವಂತೆ ಕಂಡರೂ ಸಂದರ್ಭಕ್ಕೆ ತಕ್ಕಂತೆ ಅತ್ಯಂತ ಸಮರ್ಥನಾಗಿಯೇ ವರ್ತಿಸುವನು. ಅವನು ಕುಸ್ತಿಯಲ್ಲಿ, ಯುದ್ಧ ಮಾಡುವುದರಲ್ಲಿ, ರಾಜಕಾರಣದಲ್ಲಿ ಜಯಶಾಲಿ— ಶಾಂತಿ ಗೋಸುಗವಾಗಿ ಮತ್ತು ಇತರರ ರಕ್ಷಣೆಗಾಗಿ ಅನೇಕ ಅಸುರರನ್ನು

> **ಶ್ರೀಕೃಷ್ಣನು ಭರತಖಂಡದ ನಾಯಕ. ಅವನ ಒಂದು ಮಾತಿಗೆ ರಾಜರು ಸಿಂಹಾಸನವನ್ನು ಬಿಟ್ಟು ಕೆಳಗೆ ಬರುತ್ತಿದ್ದರು. ಅವನು ಸ್ವಯಂ ರಾಜನಾಗಲು ಇಚ್ಛಿಸುವುದಿಲ್ಲ. ಬಾಲ್ಯಕಾಲದಲ್ಲಿ ಎಷ್ಟು ಸರಳ ಸ್ವಭಾವದಿಂದ ಗೋಪಿಯರೊಂದಿಗೆ ಕ್ರೀಡೆಯಾಡುತ್ತಿದ್ದನೊ ಅದೇ ಸರಳ ಸ್ವಭಾವದಿಂದಿರುವನು ಜೀವನದ ಬೇರೆ ಅವಸ್ಥೆಗಳಲ್ಲಿಯೂ.**
>
> —ಸ್ವಾಮಿ ವಿವೇಕಾನಂದ

ಕೊಂಡನು. ಅಲ್ಲಿಯೂ ಕೂಡ ಅವನು ಯಾವ ಮಿಥ್ಯಾಭಿಲಾಷೆಗಳಿಗೂ ಮನಸೋಲಲಿಲ್ಲ. ಯಾವ ಪ್ರಾಪಂಚಿಕ ಸುಖಗಳಿಗೂ ಹಾತೊರೆಯಲಿಲ್ಲ.

## ಗೀತಾಚಾರ್ಯ ಶ್ರೀಕೃಷ್ಣ

ಶ್ರೀಕೃಷ್ಣನು ಮೊದಲ ಬಾರಿಗೆ ಸ್ವಯಂ ಧರ್ಮಗುರುವಿನಂತೆ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಕಾಣಿಸಿಕೊಳ್ಳುವನು ಮತ್ತು ತನ್ನ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ತನ್ನ ಅಚ್ಚುಮೆಚ್ಚಿನ ಅರ್ಜುನನಿಗೆ ತೋರಿಸುವನು. ಅದಕ್ಕೆ ಮುಂಚೆ ಯಾರೂ ಆಧ್ಯಾತ್ಮಿಕ ಸತ್ಯಗಳನ್ನು ಅವನಿಂದ ಕಲಿಯಲು ಶಿಷ್ಯನಂತೆ ಅವನ ಬಳಿಗೆ ಹೋಗಿರಲಿಲ್ಲ. ಹಿಂದೆ ಹೇಳಿದಂತೆ, ಅವನು ಕೆಲವರನ್ನು ಸಂಮೋಹನಗೊಳಿಸಿದ್ದನು—ಅವರು ಏನನ್ನೂ ಕಲಿಯುವ ಆವಶ್ಯಕತೆ ಇರುವಂತೆ ಭಾವಿಸಲಿಲ್ಲ. ಏಕೆಂದರೆ ಅವನ ಸಹವಾಸದಲ್ಲಿಯೇ ಅವರು ಸಾಕಷ್ಟು ಆನಂದವನ್ನು ಪಡೆದರು—ಮತ್ತು ಇತರರು ಅವನನ್ನು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಕಾಣುವಂತೆ ಭೇಟಿ ಮಾಡಿದರು; ಅವನಿಂದ ಏನನ್ನೋ ಕಲಿಯುವ ಯೋಚನೆ ಮಾಡಲಿಲ್ಲ. ಅರ್ಜುನ ಮೊದಲ ಬಾರಿಗೆ ಅವನನ್ನು ಹೀಗೆ ಬೇಡುವನು: 'ನನ್ನ ಸ್ವಭಾವ ದೌರ್ಬಲ್ಯದಿಂದ ಆವೃತವಾಗಿ, ಧರ್ಮದ ವಿಷಯದಲ್ಲಿ ನನ್ನ ಮನಸ್ಸು ಕದಡಿಹೋಗಿ ನಾನು ಆರ್ತನಾಗಿ ಬೇಡುವೆನು. ಯಾವುದು ನನಗೆ ಒಳ್ಳೆಯದೊ ಅದನ್ನು ನಿರ್ಣಾಯಕವಾಗಿ ಹೇಳು. ನಾನು ನಿನ್ನ ಶಿಷ್ಯ. ನಿನ್ನಲ್ಲಿ ಮೊರೆಹೊಕ್ಕಿರುವ ನನಗೆ ದಾರಿ ತೋರು.' ಅಲ್ಲಿ ಅವನು ಮೊದಲು ಜೀವನದ ತತ್ತ್ವವನ್ನು ಕುರಿತು ಮಾತನಾಡುವನು ಮತ್ತು ಕಾಲಾನಂತರ ಮುಂದಿನ ಜನಾಂಗಕ್ಕೆ ಅಮೂಲ್ಯ ನಿಧಿಯಂತೆ ಇರುವ ಅನೇಕ ಆಧ್ಯಾತ್ಮಿಕ ಸತ್ಯಗಳನ್ನು ಹೊರಗೆಡಹುವನು.



ಭಗವದ್ಗೀತೆಯು ಅಕ್ಷಯ ಮಹತ್ವದಿಂದ ಕೂಡಿದ ಒಂದು ಅಪೂರ್ವ ಕೃತಿ. .... ಅದು ಸರ್ವಕಾಲಕ್ಕೂ ಮತ್ತು ಎಲ್ಲ ಧಾರ್ಮಿಕ ಜೀವನಕ್ಕೂ ಅನ್ವಯವಾಗುವ ಗಭೀರ ಅಂತರ್ಜ್ಞಾನವನ್ನು ನೀಡುವುದಲ್ಲದೆ, ಇಂಡೋ-ಜರ್ಮನ್ ಧಾರ್ಮಿಕ ಇತಿಹಾಸದ ಅತಿ ಮುಖ್ಯ ಮುಖವನ್ನು ಅದು ಉತ್ಕೃಷ್ಟ ರೀತಿಯಲ್ಲಿ ಪ್ರತಿನಿಧಿಸುತ್ತದೆ.

—*J.W. Hauer, ಭಾರತದಲ್ಲಿದ್ದ ಜರ್ಮನಿಯ ಕ್ರೈಸ್ತ ಮಿಷನರಿ.*

ಆದರೆ ಕೇವಲ ಮಾತುಗಳು—ಕೇವಲ ತತ್ತ್ವ, ಒಬ್ಬ ವ್ಯಕ್ತಿಯನ್ನು ತೃಪ್ತಿಪಡಿಸಲಾಗುವುದಿಲ್ಲ. ತತ್ತ್ವಕ್ಕೂ ಮತ್ತು ಅನುಷ್ಠಾನಕ್ಕೂ ಮಧ್ಯೆ ಒಂದು ದೊಡ್ಡ ಅಂತರವಿದೆ. ಅದನ್ನು ಅತಿಕ್ರಮಿಸುವುದು ಹೇಗೆ? ತತ್ತ್ವಗಳು ಎಷ್ಟೇ ಪರಿಪೂರ್ಣವಾಗಿದ್ದರೂ ಅವನ್ನು ಅನುಷ್ಠಾನಕ್ಕೆ ತರುವಲ್ಲಿ ದುಸ್ಸಾಧ್ಯವಾದ ಕಷ್ಟಗಳು ಎದುರಾಗಿ ನಮ್ಮನ್ನು ಹತಾಶರನ್ನಾಗಿ ಮಾಡುತ್ತವೆ. ಅರ್ಜುನನೂ ಕೂಡ ಅಂತಹ ಸ್ಥಿತಿಯಲ್ಲಿದ್ದ. ಆಗ ಕೃಷ್ಣನು ತನ್ನನ್ನು ಕೇವಲ ಆಚಾರ್ಯನ ಸ್ಥಿತಿಯಿಂದ ಮೇಲಕ್ಕೇರಿಸಿ ತಾನು ಸ್ವಯಂ ಭಗವಂತನೆಂದು ತನ್ನ ನಿಜಸ್ವರೂಪವನ್ನು ತೋರಿಸುವನು. ತಾನೇ ಎಲ್ಲ ಭ್ರಾಂತಿಗಳಿಗೂ ಕಾರಣವೆಂದೂ ತಾನೇ ಭಗವಂತನ ಅವತಾರವೆಂದೂ ಸ್ಪಷ್ಟವಾಗಿ ತಿಳಿಸುತ್ತಾ ಅರ್ಜುನನಿಗೆ ಹೇಳುವನು : 'ನಿನ್ನ ಮನಸ್ಸನ್ನು ನನ್ನ ಆಲೋಚನೆಯಿಂದ ತುಂಬಿಸು, ನನ್ನ ಭಕ್ತನಾಗಿರು, ನನಗಾಗಿ ತ್ಯಾಗ ಮಾಡು, ನನಗೆ ನಮಸ್ಕರಿಸು ; ಹೀಗೆ ನನ್ನಲ್ಲಿ ಸ್ಥಿತವಾದ ಮನಸ್ಸುಳ್ಳವನಾಗಿ ನನ್ನನ್ನು ಪರಮ ಗುರಿಯಾಗಿ ಸ್ವೀಕರಿಸಿ ನನ್ನೆಡೆಗೆ ನೀನು ಬರುವೆ.' ಆದರೆ ಅರ್ಜುನನು ಅವಾಕ್ಕಾದನು. ಯಾರು ತನ್ನ ಮಿತ್ರನಾಗಿದ್ದನೊ, ಯಾರು ತನ್ನ ಪ್ರೀತಿಗೆ ಓಗೊಟ್ಟು ತನಗೆ ಸಾರಥಿಯಾದನೊ ಅವನು ಸ್ವಯಂ ಭಗವಂತನೆಂದು ನಂಬಬಹುದೆ? ಅರ್ಜುನನಿಗೆ ಅರ್ಧ ಸಂದೇಹ, ಅರ್ಧ ಮನದಟ್ಟಾಗಿದೆ. ಅವನು ಶ್ರೀಕೃಷ್ಣನನ್ನು ಶ್ರೇಷ್ಠ ದೇವತೆಯೆಂದು ತಿಳಿದು ಪ್ರಾರ್ಥಿಸಲು ಮೊದಲು ಮಾಡುವನು. ಆದರೆ ಮರುಕ್ಷಣವೇ ಪೂರ್ಣ ಆವಿರ್ಭಾವವನ್ನು ಬಯಸುವನು. ಆಗ ಶ್ರೀಕೃಷ್ಣ ತನ್ನ ವಿಶ್ವರೂಪವನ್ನು ತೋರುವನು—ತಾನು ಹೇಗೆ ಸರ್ವಾಂತರ್ಯಾಮಿಯಾಗಿ ಇರುವನು, ಅನವರತ ಸೃಷ್ಟಿಕರ್ತನೂ ಮತ್ತು ಸಂಹಾರಕನೂ ಆಗಿರುವನು ಮತ್ತು ಹೇಗೆ ಮಾನವರು ತನ್ನ ಕೈಯಲ್ಲಿ ಕೇವಲ ನಿಮಿತ್ತರಾಗಿರುವರು ಮತ್ತು ಕೇವಲ ಅವನ ಜ್ಯೋತಿಯನ್ನು ಪ್ರತಿಬಿಂಬಿಸಿ ಪ್ರಕಾಶಿಸುವರು ಎಂಬುದನ್ನು ತೋರುವನು. ಅನಂತರ ಅವನು ತನ್ನ ಸೌಮ್ಯ ಮಾನವ ರೂಪವನ್ನು ತಾಳಿ, ಯಾವ ದರ್ಶನವನ್ನು ಅರ್ಜುನನು ಕಂಡನೊ ಅದು ದೇವತೆಗಳಿಗೂ ದುರ್ಲಭವೆಂದು ಹೇಳುವನು—'ವೇದಗಳ ಜ್ಞಾನದಿಂದಾಗಲಿ, ಉಗ್ರಸಾಧನೆಯಿಂದಾಗಲಿ, ದಾನಗಳಿಂದಾಗಲಿ, ಅಥವಾ ತ್ಯಾಗದಿಂದಾಗಲಿ ನೀನು ನೋಡಿದಂತೆ ನನ್ನನ್ನು ಕಾಣಲಾಗುವುದಿಲ್ಲ.' ಹಾಗಾದರೆ ಅರ್ಜುನನದೇನು ವಿಶೇಷ? ಅದು ಅರ್ಜುನನ 'ಏಕಾಗ್ರ ಭಕ್ತಿಯ' ಬೆಲೆ—ಶ್ರೀಕೃಷ್ಣನನ್ನು ಕೇವಲ ಸಖನಂತೆ ಪ್ರೀತಿಸಿದರೂ ಕೂಡ. ಕೊನೆಗೆ ಅರ್ಜುನನಿಗೆ ಸಂಪೂರ್ಣವಾಗಿ ವಿಶ್ವಾಸವುಂಟಾಯಿತು. ತನ್ನ ಭ್ರಾಂತಿ ನಾಶವಾಯಿತೆಂದೂ ತನ್ನ ನಿಜಸ್ವರೂಪವನ್ನು ಅರಿತನೆಂದೂ ಹೇಳುತ್ತಾ ಯುದ್ಧಕ್ಕೆ ಸಮ್ಮತಿಸುವನು : 'ನಿನ್ನ ಮಾತಿನಂತೆ ನಡೆಯುವೆನು.'

ಅರ್ಜುನನಂತಹ ಆಪ್ತನಿಗೂ ಕೂಡ ಕರ್ಮದಿಂದ ವಿನಾಯಿತಿ ಇಲ್ಲ. ಅವನ ಸ್ಥಾನಕ್ಕೆ ವಿಹಿತವಾದ ಕರ್ತವ್ಯಗಳನ್ನು ಮಾಡಲೇಬೇಕು. ಆದ್ದರಿಂದ ಅವನು ಭಯಾನಕವಾದ ಯುದ್ಧಭೂಮಿಯಲ್ಲಿ ಸೈನ್ಯವನ್ನು ಮುನ್ನಡೆಸುವನು. ಎಲ್ಲಿ ಸ್ವಯಂ ಶ್ರೀಕೃಷ್ಣನೇ ಮಾರ್ಗವನ್ನು ತೋರಿಸುವನೊ ಅಲ್ಲಿ ಖಂಡಿತವಾಗಿ ಜಯವಾಗುವುದು—ಅಲ್ಲಿ ಶ್ರೇಯಸ್ಸು ಉಂಟಾಗುವುದು ಮತ್ತು ಅರ್ಜುನನು ಜಯಶೀಲನಾಗುವನು.

## ಗೀತೆಯ ಮಹತ್ವ

ವೃಂದಾವನದ ಶ್ರೀಕೃಷ್ಣ ಮಾತ್ರ ನಮ್ಮಿಂದ ಗೌರವಾದರಗಳನ್ನು ಸ್ವೀಕರಿಸ ಬಾರದು. ನಾವು ಗೀತೆಯ ಕೃಷ್ಣನನ್ನೂ ಪೂಜಿಸಬೇಕು ಮತ್ತು ಅವನ ಕರ್ಮದ ಜೀವನವನ್ನೂ ಸಹ ಅನುಕರಿಸಬೇಕು. ಅಲ್ಲದಿದ್ದರೆ, ಭಗವಂತನಿಗೆ ಆರೋಪಿಸಿರುವ ಸಣ್ಣ ಪುಟ್ಟ ನಡವಳಿಕೆಗಳನ್ನು ಆಧರಿಸಿ ಅವನನ್ನು ಟೀಕಿಸುವುವರಲ್ಲಿ ತಮ್ಮ ಶಕ್ತಿಯನ್ನು ವ್ಯಯ ಮಾಡುವ ಅಲ್ಪಮತಿ ವಿಮರ್ಶಕರಿಗಿಂತ ನಾವೇನೂ ಉತ್ತಮರಾಗುವುದಿಲ್ಲ. ಇಂದಿನ ದಿನಗಳಲ್ಲಿ ತಮಸ್ಸಿನಲ್ಲಿ ಮುಳುಗಿರುವ ನಾವು ಕರ್ಮದಿಂದ ನಮ್ಮನ್ನು ಪರಿಶುದ್ಧ ಮಾಡಿಕೊಳ್ಳಬೇಕಾದರೆ, ವಾಸ್ತವವಾಗಿ ವೃಂದಾವನದ ಶ್ರೀಕೃಷ್ಣನಿಗಿಂತ ಹೆಚ್ಚಾಗಿ ಗೀತೆಯ ಶ್ರೀಕೃಷ್ಣನನ್ನು ಪೂಜಿಸುವ ಆವಶ್ಯಕತೆ ಇದೆ. ನಿಜವಾಗಿ ಹೇಳಬೇಕಾದರೆ, ಗೀತೆಯಲ್ಲಿರುವ ಅವನ ಬೋಧನೆಗಳ ಮೂಲಕ ನಾವು ಶ್ರೀಕೃಷ್ಣನನ್ನು ಸಮೀಪಿಸಿದರೆ ವೃಂದಾವನದ ಶ್ರೀಕೃಷ್ಣನನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ವ್ಯಕ್ತಿ ಸಂಪೂರ್ಣವಾಗಿ ಪರಿಶುದ್ಧನಾಗುವವರೆಗೆ ಗೀತೆಯೆ ಶ್ರೇಷ್ಠ ಮಾರ್ಗದರ್ಶಕ ಎಂದು ಹೇಳುವರು.

> ಮೊದಲು ಕಾಂಚನ, ಕೀರ್ತಿ, ಯಶಸ್ಸು ಇವುಗಳ ಮೇಲಿನ ಮತ್ತು ಈ ಕ್ಷುದ್ರ ಮಿಥ್ಯಾ ಸಂಸಾರದ ಮೇಲಿನ ವ್ಯಾಮೋಹವನ್ನು ತ್ಯಜಿಸಿ. ಆಗ ಮಾತ್ರ ನೀವು ಗೋಪೀಪ್ರೇಮವನ್ನು ಗ್ರಹಿಸಬಲ್ಲಿರಿ. ಎಲ್ಲಿಯವರೆಗೆ ಮನಸ್ಸು ಅಶುದ್ಧವಾಗಿರುವುದೋ ಅಲ್ಲಿಯವರೆಗೆ ಅದನ್ನು ಗ್ರಹಿಸಲು ಪ್ರಯತ್ನಿಸಬೇಡಿ.
>
> —ಸ್ವಾಮಿ ವಿವೇಕಾನಂದ

## ಕೃಷ್ಣಾವತಾರದ ವೈಶಿಷ್ಟ್ಯ

ಶ್ರೀಕೃಷ್ಣನ ಜೀವನದಲ್ಲಿ ಅಸಾಧಾರಣವಾದ ಒಂದು ವಿಷಯವನ್ನು ನೋಡುವೆವು. ಇತಿಹಾಸದಲ್ಲಿ ಲಿಖಿತವಾಗಿರುವ ಇತರ ಎಲ್ಲಾ ದೈವಾಂಶ ಪುರುಷರ ಜೀವನದಲ್ಲಿ ನಾವು ನೋಡುವುದೇನೆಂದರೆ, ಅವರು ಪ್ರಾರಂಭದಲ್ಲಿ ಮನುಷ್ಯ ಜೀವನದ ದುಃಖ, ತಾಪತ್ರಯ, ನೋವುಗಳಿಗೆ ಸಿಲುಕಿ, ಸಂಕಟ ಮತ್ತು ಹೋರಾಟಗಳ ಮೂಲಕ ಸಾಗಿ ನಂತರ ಮನುಷ್ಯರನ್ನು ಮೇಲೆತ್ತುವುದಕ್ಕೆ ತಮ್ಮ ಕೈಗಳನ್ನು ನೀಡುವರು. ಆದರೆ ಶ್ರೀಕೃಷ್ಣನಲ್ಲಿ ಅಂತಹ ಕಾಲ ಇಲ್ಲವಾಗಿರುವುದು. ಕೆಲವು ಗ್ರಂಥಗಳು ಅವನು ಸ್ವಲ್ಪ ಯೋಗವನ್ನು ಅಭ್ಯಾಸ ಮಾಡಿದನೆಂದು ಸೂಚಿಸುವುವಾದರೂ ಅವನು ಭಗವಂತನಿಂದ ದೂರವಾಗಿ ವಿರಹವ್ಯಥೆಯನ್ನು ಅನುಭವಿಸಿ ನಂತರ ಭಗವಂತನಲ್ಲಿ ಶರಣಾದನೆಂದು ಹೇಳಿರುವುದನ್ನು ನಾವು ಎಲ್ಲಿಯೂ ನೋಡುವುದಿಲ್ಲ. ಪ್ರಾರಂಭದಿಂದಲೂ ಅವನು 'ಪೂರ್ಣಕಾಮ' ಮತ್ತು 'ಆತ್ಮತೃಪ್ತ'ನಾಗಿರುವಂತೆಯೆ ಇದ್ದನು ; ಹುಟ್ಟಿದಾಗಿನಿಂದಲೂ ಭಗವಂತನೊಂದಿಗೆ ತನ್ನ ತಾದಾತ್ಮ್ಯದ ಅರಿವು ಅವನಿಗಿತ್ತು. ಅವನ ಜೀವನದಲ್ಲಿ ಕಾಣುವ ಮತ್ತೊಂದು ಅಂಶವಿದೆ. ಇತರ ದೇವದೂತರು ದಾರಿ ತೋರುವುದಕ್ಕಾಗಿ ಭೂಮಿಯ ಮೇಲೆ ಜೀವಿಸಿದಂತಿದೆ—ತಮ್ಮ ಜೀವನದಲ್ಲಿ ಸೂಚಿಸಿರುವರು ಇಲ್ಲವೇ ಹೇಳಿರುವರು, 'ನಾನು ಮಾರ್ಗ' ಎಂದು. ಆದರೆ ಶ್ರೀಕೃಷ್ಣ ಸ್ಪಷ್ಟವಾಗಿ ಹೇಳಿರುವನು, 'ನಿನ್ನ ಮನಸ್ಸನ್ನು ನನ್ನ ಆಲೋಚನೆಯಿಂದ ತುಂಬಿಸು, ನನ್ನ ಭಕ್ತನಾಗಿರು, ನನಗಾಗಿ ತ್ಯಜಿಸು, ನನಗೆ ತಲೆಬಾಗು, ನೀನು ನನ್ನನ್ನು ಸೇರುವೆ, ನಿಜವಾಗಿ ನಾನು ಆಶ್ವಾಸನೆ ಕೊಡುತ್ತೇನೆ... ಎಲ್ಲ ಧರ್ಮಗಳನ್ನೂ ತ್ಯಜಿಸಿ ಕೇವಲ ನನ್ನಲ್ಲಿ ಶರಣಾಗು; ನಾನು ಸರ್ವ ಪಾಪಗಳಿಂದಲೂ ನಿನ್ನನ್ನು ಮುಕ್ತನನ್ನಾಗಿ ಮಾಡುತ್ತೇನೆ; ಚಿಂತಿಸಬೇಡ.' ಈ ಕಾರಣಕ್ಕಾಗಿ ಏನು ಶ್ರೀಕೃಷ್ಣನನ್ನು ಭುವಿಯ ಮೇಲೆ ಭಗವಂತನ ಪೂರ್ಣಾವತಾರವೆಂದು ನಂಬಿರುವುದು ಮತ್ತು ಇತರರನ್ನು ಕೇವಲ ಅಂಶಾವತಾರಿಗಳೆಂದು ಪರಿಗಣಿಸಿರುವುದು?

ಓಂ

ಸ್ವಾಮಿ ಜ್ಞಾನೇಶ್ವರಾನಂದರು ೧೯೨೦ರಲ್ಲಿ ಸ್ವಾಮಿ ಬ್ರಹ್ಮಾನಂದರಿಂದ ಸಂನ್ಯಾಸ ಸ್ವೀಕರಿಸಿದರು. ನಂತರ ಬನಾರಸ್ ಸೇವಾಶ್ರಮಕ್ಕೆ ಹೋಗುವ ಮುನ್ನ ಶ್ರೀಮಾತೆ ಶಾರದಾದೇವಿಯವರ ಆಶೀರ್ವಾದ ಪಡೆಯಬೇಕೆಂಬ ಅವರ ಬಯಕೆ ಈಡೇರಲೇ ಇಲ್ಲ. ಇದಕ್ಕಾಗಿ ಅವರು ತುಂಬ ದುಃಖಪಟ್ಟರು.

ಭಗವದ್ಗೀತೆಯನ್ನು ಅಧ್ಯಯನ ಮಾಡುವಾಗ ಅದರ ಒಂದು ಶ್ಲೋಕ ಅವರಿಗೆ ಮನದಟ್ಟಾಗಲಿಲ್ಲ. ಎಷ್ಟೋ ಭಾಷ್ಯಗಳನ್ನು ಓದಿದರೂ ಅದರ ಅಂತರಾರ್ಥ ಹೊಳೆಯಲಿಲ್ಲ. ಮುಂದೆ ಕಲ್ಕತ್ತೆಗೆ ಹೋದಾಗ ಶ್ರೀಮಾತೆಯವರನ್ನು ಈ ಶ್ಲೋಕದ ಅರ್ಥದ ಬಗ್ಗೆ ಕೇಳಬೇಕೆಂದು ಅವರು ನಿರ್ಧರಿಸಿದರು. ಆದರೆ ಆ ಆಶೆ ಕೈಗೂಡಲಿಲ್ಲ. ೨೧.೦೭.೧೯೨೦ರಂದು ಶ್ರೀಮಾತೆಯವರು ದೇಹತ್ಯಾಗ ಮಾಡಿದರು. ಮರುದಿನ ಟೆಲಿಗ್ರಾಫ್ ಮೂಲಕ ವಿಷಯ ತಿಳಿದಾಗ ಜ್ಞಾನೇಶ್ವರಾನಂದರ ದುಃಖ ಹೇಳತೀರದು. ಅವರು ಹೇಳುತ್ತಾರೆ : 'ಎಂಥ ಶೋಚನೀಯ! ನಾನು ಸಂನ್ಯಾಸ ಸ್ವೀಕರಿಸಿದ ಮೇಲೆ ಶ್ರೀಮಾತೆಯವರ ದರ್ಶನ ನನಗಾಗಿಲಿಲ್ಲ. ಈ ಅಸಾಧ್ಯ ದುಃಖವನ್ನು ಸಹಿಸಲಾಗದೆ ಹಾಸಿಗೆಯ ಮೇಲೆ ಬಿದ್ದು ಬಿಕ್ಕಿ ಬಿಕ್ಕಿ ಅಳತೊಡಗಿದೆ. ಕ್ರಮೇಣ ನನಗೆ ನಿದ್ರೆ ಬಂತು. ಆಗ ನನಗೊಂದು ಕನಸಾಯಿತು. ಶ್ರೀಮಾತೆಯವರು ಕೋಣೆಯನ್ನು ಪ್ರವೇಶಿಸಿದರು. ಸುತ್ತಲೂ ದಿವ್ಯಪ್ರಭೆ. ಅವರು ನನ್ನನ್ನು ಸಮಾಧಾನ ಮಾಡುತ್ತ ಅನೇಕ ರೀತಿಯಲ್ಲಿ ತಮ್ಮ ವಾತ್ಸಲ್ಯವನ್ನು ವ್ಯಕ್ತಪಡಿಸಿದರು. ಆಶ್ಚರ್ಯವೇನೆಂದರೆ ಗೀತೆಯಲ್ಲಿ ನನಗೆ ಅರ್ಥವಾಗದಿದ್ದ ಶ್ಲೋಕವನ್ನೇ ಉಲ್ಲೇಖಿಸಿ ಅದರ ಅರ್ಥವನ್ನು ವಿವರಿಸಿದರು. ನಾನು ಎಚ್ಚರಗೊಂಡಾಗ ನನ್ನ ಮನಸ್ಸು ಶಾಂತಿಯಿಂದ ತುಂಬಿಹೋಗಿತ್ತು, ದುಃಖ ದೂರವಾಗಿತ್ತು. ಶ್ಲೋಕದ ಅರ್ಥ ಮನಸ್ಸಿನಲ್ಲಿ ಉಳಿದಿತ್ತು. ಅವರು ಹೇಳಿದ ಅರ್ಥ ನನಗೆ ತುಂಬ ತೃಪ್ತಿಕರವಾಗಿತ್ತು. ಈ ಕನಸು ನನ್ನ ಮನಸ್ಸಿನ ಮೇಲೆ ಆಳವಾದ ಪ್ರಭಾವವನ್ನು ಉಂಟುಮಾಡಿತು. ಅದನ್ನು ನಾನೆಂದೂ ಮರೆಯಲಾರೆ.'